**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿ:15-06-2018**

**ಪಾಟೀ ಸವಾಲು: ಶ್ರೀ ಆರ್ ಎನ್ ಕೆ ವಕೀಲರಿಂದ**

ನನ್ನ ಸ್ವಂತ ಊರು ಬೆಳಗೋಡು. ನನ್ನ ತಂದೆಯ ಕಾಲದಿಂದಲೂ ನಾವು ಬೆಳಗೋಡಿನಲ್ಲಿ ವಾಸವಿರುತ್ತೇವೆ. ನಾನು ಬಾಳ್ಳುಪೇಟೆಯಲ್ಲಿ 10 ವರ್ಷಗಳಿಂದ ವಾಸವಿರುತ್ತೇನೆ. ಬಾಳ್ಳುಪೇಟೆಯಲ್ಲಿ ವಾಸವಾಗಿರುವ ಪೂರ್ವದಲ್ಲಿ ಬೆಳಗೋಡಿನಲ್ಲಿ ವಾಸವಾಗಿದ್ದೆನು. ನನ್ನ ಆಸ್ತಿಯಲ್ಲಿ ಒತ್ತುವರಿ ಮಾಡಿ ಮನೆ ಕಟ್ಟಿರುತ್ತಾರೆ ಎಂದು ದಾವೆ ಸಲ್ಲಿಸಿರುತ್ತೇನೆ. ನಾನು 1ನೇ ಪ್ರತಿವಾದಿಯ ತೋಟದಲ್ಲಿ 1989 ರಿಂದ 1994 ರ ತನಕ ರೈಟರ್ ಆಗಿ ಕೆಲಸ ಮಾಡುತ್ತಿದ್ದೆ. ನಾನು ಕೆಲಸ ಬಿಟ್ಟ ನಂತರ ಒಂದೂವರೆ ವರ್ಷ ಮನೆಯಲ್ಲಿ ಇದ್ದೆನು. ನಂತರ ನಾನು ಬೇರೆ ಕಡೆ ಕೆಲಸಕ್ಕೆ ಹೋಗಿರುತ್ತೇನೆ. 1996 ರಲ್ಲಿ ನಾನು ಆರೋಗ್ಯ ಸರಿ ಇಲ್ಲದ ಕಾರಣ ಬೆಂಗಳೂರಿಗೆ ಹೋಗಿರುತ್ತೇನೆ. 4 ವರ್ಷಗಳ ತನಕ ನಾನು ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. 2011 ರಲ್ಲಿ ನನಗೆ ಶಸ್ತ್ರಚಿಕಿತ್ಸೆಯಾಗಿರುತ್ತದೆ. ಶಸ್ತ್ರಚಿಕಿತ್ಸೆಯಾದ 3 ವರ್ಷಗಳ ತನಕ ನಾನು ಬೆಂಗಳೂರಿನಲ್ಲಿ ನನ್ನ ಮಗಳ ಮನೆಯಲ್ಲಿದ್ದೆ. ನಂತರ ನಾನು ಬಾಳ್ಳುಪೇಟೆಗೆ ಬಂದಿರುತ್ತೇನೆ. ಅಲ್ಲಿ ನಾನು ಬಾಡಿಗೆ ಮನೆಯಲ್ಲಿ ವಾಸವಿರುತ್ತೇನೆ. ಬೆಳಗೋಡು ಗ್ರಾಮದಲ್ಲಿ ನನಗೆ ಯಾವುದೇ ಮನೆ ಇರುವುದಿಲ್ಲ. ನನ್ನ ಮಕ್ಕಳು 1996 ಕ್ಕಿಂತ ಪೂರ್ವದಲ್ಲಿಯೇ ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ. ದಾವಾ ಆಸ್ತಿಯಲ್ಲಿ ನಾನು ಕಾಫಿ ಬೆಳೆಯುತ್ತೇನೆ. ಸದರಿ ಕಾಫಿ ಗಿಡಗಳು 3 ರಿಂದ 4 ವರ್ಷದ ಒಲ್ಡ್ಅರೇಬಿಕಾ ಕಾಫಿ ಗಿಡಗಳಾಗಿರುತ್ತವೆ. ಅರೇಬಿಕಾ ಮತ್ತು ರೋಬಾಸ್ಟಾ ಬೇರೆ ಬೇರೆ ತಳಿಗಳು ಎಂದರೆ ಸರಿ. ಪ್ರತಿ ಎಕರೆಗೆ 560 ಕಾಫಿ ಗಿಡಗಳು ಇರುತ್ತವೆ. ಒಟ್ಟು 1680 ಕಾಫಿಗಿಡಗಳಿವೆ. ಒಟ್ಟು 3 ಭಾಗಗಳಿವೆ. 2 ರಸ್ತೆಗಳಿದ್ದು , ಒಂದು ಸರ್ಕಾರಿ ರಸ್ತೆಯಾಗಿದೆ. 400 ರಿಂದ 500 ಸಿಲ್ವರ್ ಗಿಡಗಳಿವೆ. 4 ಬೀಟೆ ಮರಗಳಿವೆ. ಕಾಫಿಯನ್ನು ಹೊರತುಪಡಿಸಿ ಬೇರೆ ಬೆಳೆ ಬೆಳೆದಿರುವುದಿಲ್ಲ. ಸದರಿ ಗಿಡಗಳು ಫಸಲು ನಿಡುತ್ತವೆಯೇ ಅಥವಾ ಇಲ್ಲವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು ಈಗ ತೋಟಕ್ಕೆ ಹೋಗುತ್ತಿಲ್ಲ ಎಂದು ನುಡಿಯುತ್ತಾರೆ. ನಾನು ತೋಟಕ್ಕೆ ಹೋಗುವುದು ಬಿಟ್ಟಾಗಿನಿಂದ ಫಸಲು ಎಷ್ಟು ಬರುತ್ತಿದೆ ಎಂದು ನನಗೆ ಗೊತ್ತಿಲ್ಲ. ನಾನು 2008-09 ರಲ್ಲಿ ತೋಟಕ್ಕೆ ಹೋಗಿರುತ್ತೇನೆ. ಆಗ ಯಾವುದೆ ಫಸಲು ಇರಲಿಲ್ಲ, ಖಾಲಿ ಜಾಗ ಇತ್ತು. 2008 ರಲ್ಲಿ ಉಳುಮೆ ಮಾಡಿ 2010 ರಲ್ಲಿ ಕಾಫಿ ಗಿಡ ಹಾಕಿರುತ್ತೇನೆ. ಸರ್ವೆ ನಂ. 177 ಒಟ್ಟು 7 ಎಕರೆ ಇದ್ದು , ಅದರಲ್ಲಿ ನನಗೆ 3 ಎಕರೆ 21 ಗುಂಟೆ ಮಂಜೂರಾಗಿರುತ್ತದೆ. ಉಳಿದ 3 ಎಕರೆ 21 ಗುಂಟೆ ಮೊಹಮ್ಮದ್ ಫಾಸಿಲ್‌ರವರಿಗೆ ಮಂಜೂರಾಗಿರುತ್ತದೆ. ಸರ್ವೆ ನಂ. 177 ಯಾವಾಗ ದುರಸ್ತಾಗಿ ಪೋಡಾಗಿದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 177/1 ಈಗ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ನಾನು ನ್ಯಾಯಾಲಯಕ್ಕೆ ಕಂದಾಯ ಸಲ್ಲಿಸಿದ್ದಕ್ಕೆ ಯಾವುದೇ ರಶೀದಿಗಳನ್ನು ಹಾಜರುಪಡಿಸಿಲ್ಲ. ನಾನು 1985 ರಿಂದ 1987 ರ ತನಕ ನನ್ನ

ಸ್ವಾಧೀನದಲ್ಲಿರುವವರೆಗೆ ಕಂದಾಯ ಕಟ್ಟಿರುತ್ತೇನೆ. ನಂತರ 1ನೇ ಪ್ರತಿವಾದಿ ಕಂದಾಯ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆರ್.ಟಿ.ಸಿ. ಯಾವ ವರ್ಷದ ವರೆಗೆ ನನ್ನ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಆರೋಗ್ಯ ಸರಿ ಇರುವ ತನಕ ಕಂದಾಯ ಕಟ್ಟಿರುತ್ತೇನೆ. ಹೃದಯದ ತೊಂದರೆ ಬಂದ ಮೇಲೆ ನಾನು ಕಂದಾಯ ಕಟ್ಟಿರುವುದಿಲ್ಲ. ನಾನು 2014 ರಲ್ಲಿ ತೋಟಕ್ಕೆ ಹೋಗಿದ್ದು , ಆಗ 1ನೇ ಪ್ರತಿವಾದಿ ಗಲಾಟೆ ಮಾಡಿರುತ್ತಾರೆ. 2008 ರಲ್ಲಿ ನನ್ನ ಹೆಸರನಲ್ಲಿ ಕಂದಾಯ ಕಟ್ಟಿರುತ್ತೇನೆ. ಆಗ ಆರ್.ಟಿ.ಸಿ. ನನ್ನ ಹೆಸರಿನಲ್ಲಿತ್ತು. 2008 ರಲ್ಲಿ ಆರ್.ಟಿ.ಸಿ ನನ್ನ ಹೆಸರಿನಲ್ಲಿತ್ತು ಎಂದು ತೋರಿಸುವ ಬಗ್ಗೆ ಆರ್.ಟಿ.ಸಿ ಹಾಜರುಪಡಿಸಲು ತೊಂದರೆ ಇರುವುದಿಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ನೀಡಿ ಮುಂದೂಡಲಾಯಿತು.**

ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೆ ಕೇ ಸ ಇ

ಸಿವಿಲ್ ನ್ಯಾಯಾಧೀಶರು